ಬೆಂಗಳೂರಿನ ವೆಂಕಟಾಲ ಗ್ರಾಮದವರಾದ ವಿ.ಎಂ. ಮಂಜುನಾಥ್ ಕವಿ ಹಾಗೂ ಕಥೆಗಾರ. ರಂಗಭೂಮಿ ಕ್ಷೇತ್ರದಲ್ಲಿಯೂ ಸಕ್ರಿಯವಾಗಿ ತೊಡಗಿಸಿಕೊಂಡವರು. 'ಫಾದರ್ 55 ಮತ್ತು ನೀನಾಸಂ ಡೈರಿಯ ಕವಿತೆಗಳು', 'ಲೆವೆಲ್ ಕ್ರಾಸಿಂಗ್' ಎಂಬ ಕವನಸಂಕಲನಗಳು ಮತ್ತು 'ಬ್ರಾಂಡಿ' ಎಂಬ ಕಥಾಸಂಕಲನ ಪ್ರಕಟವಾಗಿವೆ. 'ರಾಯಲ್ ಎನ್ ಫೀಲ್ಡ್','ಅಸ್ಪೃಶ್ಯ ಗುಲಾಬಿ' ಅವರು ಬರೆದ ಕಾದಂಬರಿಗಳು. ಹೈವೇ ಥಿಯೇಟರ್ಸ್ ಡ್ರಾಮಾ ಟ್ರೂಪ್ ಮೂಲಕ ನಾಟಕ ನಿರ್ದೇಶನ ಮಾಡುತ್ತಿದ್ದಾರೆ. ಚಿತ್ರಕಲಾವಿದರಾಗಿಯೂ ಗುರುತಿಸಿಕೊಂಡಿದ್ದಾರೆ.

ಎಲ್ಲಿಗೆ ಕಳಿಸಿಕೊಟ್ಟರೋ ಗೊತ್ತಾಗಲಿಲ್ಲ, ಏನೇನೋ ಸಿದ್ಧತೆ, ಕೆಲವೊಂದು ಸಲ ಆಹ್ಲಾದಕರವಾಗಿರುತ್ತಿದ್ದು, ಮತ್ತೊಂದು ಸಲಕ್ಕೆ ನರಕದ ನೆನಪು ತರಿಸುತ್ತಿತ್ತು. ಆ ಹೆಂಗಸು ಎಮ್ಮೆಗಾತ್ರದವಳು, ಮೊಲೆಗಳನ್ನು ಜೋಲಿಸಿಕೊಂಡು ಮುಂದೆ ನಿಂತಾಗ ಬವಳಿ ಬಂದಂತಾಯಿತು. ಅವಳ ಹಿಂದೆ ಗಂಡಸೊಬ್ಬ ನಿಂತಿದ್ದ. ಉರ್ದುಮಿಶ್ರಿತ ತೆಲುಗಿನಲ್ಲಿ ಏನೋ ನಿರ್ದೇಶನ ಕೊಟ್ಟಳು, ಇವಳಿಗೆ ತಿಳಿಯುವಂತಿರಲಿಲ್ಲ. ಇಡೀ ಮನೆಯ ಕಂಬವನ್ನೆಳೆದಂತೆ ಭೀಮವ್ವಳನ್ನು ಎಳೆದುಕೊಂಡ, ಅಷ್ಟೇ. ಜೀವ ತಲ್ಲಣಿಸಿತು, ಎಲ್ಲಿಗೆ ಓಡುವುದು, ನುಣುಚಿಕೊಳ್ಳುವುದೇಗೆ?

* * *

ಈಗೀಗ ಭೀಮವ್ವಳ ಕಣ್ರೆಪ್ಪೆಗಳು ಹೈದರಾಬಾದ್‌ನ ಗಿರಾಕಿಗಳನ್ನು ಹೇಗೆ ಅಣಕಿಸುತ್ತವೆಯೆಂದರೆ ಅವರು ನಿಂತಲ್ಲೇ ತಲ್ಲಣಿಸಿ ಹೋಗುವರು, ತಾವು ಸೋಲುವ ಭೀತಿಯನ್ನು ವ್ಯಕ್ತಪಡಿಸುವರು. ಆರಂಭದಲ್ಲಿ ಭೀಮವ್ವ ಇದೆಲ್ಲವನ್ನೂ ಹೇಗೆ ಜೀರ್ಣಿಸಿಕೊಂಡಿದ್ದಳು, ಆ ಮೊದಲ ದಿನ ಕೋಣೆಯ ಮೂಲೆಯೊಳಗೆ ಇವಳನ್ನು ದೂಡಿದಾಗ ನೆಲಕ್ಕೆ ಬಡಿದ ಮೊಣಕಾಲುಗಳು ಕಿತ್ತುಕೊಂಡು ರಕ್ತ ಸುರಿಯಲಾರಂಭಿಸಿದ್ದು ಈಗ ತಮಾಷೆ ಎನಿಸುತ್ತದೆ. ಆನಂತರ ನೂರಾರು ಗಂಡಸರು ಇವಳ ಮೊಣಕಾಲುಗಳನ್ನು ಚಕ್ಕೆ ಎಬ್ಬುವಂತೆ ತಮ್ಮ ಮೊಣಕಾಲುಗಳಿಂದ ಎಬ್ಬಿ ಬೆಂಕಿಯನ್ನೇ ಹರಹಿದ್ದರು, ಚಿತೆಯಂತೆ! ಕೋಣೆಯಿಂದ ಕೋಣೆಗೆ ಇವಳನ್ನು ದರದರನೆ ಎಳೆದಾಡಿದ್ದರು, ಸೊಂಟದ ಮೇಲಿನ ಲಂಗ ಇಳಿಯುವವರೆಗೂ. ಎದೆ ಕಚ್ಚಿದರು, ತೊಡೆ ಸುಟ್ಟರು, ತುಟಿಗಳನ್ನು ಬಗೆದುಹಾಕಿದರು, ಗುಣಿಗಳನ್ನು ತೆಗೆಯುವಂತೆ. ಆವೊತ್ತು ಚನ್ನವ್ವ ಇದ್ದಿದ್ದರೆ ಹೇಗೆ ಮಗಳನ್ನು ಆಲಂಗಿಸಿಕೊಂಡು, ರೆಕ್ಕೆಗಳನ್ನು ಕಟ್ಟಿಕೊಂಡು ಆಕಾಶಕ್ಕೆ ಹಾರಿಸಿಕೊಂಡು ಹೋಗುತ್ತಿದ್ದಳು! ಅಯ್ಯೋ ಇದೆಂಥ ಜೀವನ, ಹೀಗೆಲ್ಲ ತಿರುವು ತೆಗೆದುಕೊಂಡಿತು. ಅತ್ತು, ದುಃಖಿಸಿ ಮೈ ಉಡುಪುಗಳೆಲ್ಲ ಕಣ್ಣೀರಿನಿಂದ ಬಣ್ಣ ಕಳೆದುಕೊಂಡವು. ಥೂ, ಆ ವೈದ್ಯನೂ ಆ ಜಾತಿಯವನೇ, ಅಂಥೋನ ಮುಂದೆ ತೊಡೆಯಗಲಿಸಿ ಮಲಗಿಕೊಳ್ಳಬೇಕು. ತಿಂದ ಮನೆಗೆ ದ್ರೋಹ ಬಗೆದ ಸಾಬಣ್ಣ ನೆನಪಾಗುತ್ತಾನೆ. ಅವನನ್ನು ಕಾಡುಹಂದಿಯಂತೆ ಕಡಿದು ಇಡೀ ಗ್ರಾಮಕ್ಕೆ ಪಾಲು ಹಾಕಬೇಕು. ಹೀಗಿರುವಾಗ ಅವನು ಭೀಮವ್ವಳನ್ನೇ ಸಿಗಿದು ಗುಡ್ಡೆಮಾಂಸ ಹಾಕಿಬಿಟ್ಟನಲ್ಲ, ಆ ಚೇಳಿನ ಹಿಂಡು ಇವನೇ ಆಗಿಹೋದನಲ್ಲ! ಇದೇ ಬದುಕು ಇನ್ನು ಶಾಶ್ವತವಾಗಿಬಿಟ್ಟಿತಲ್ಲ ಎಂದು ಹಪಹಪಿಸುತ್ತಿರುವಾಗ ಸೈದಾಪುರದ ಹೆಣ್ಣು ದಿಲ್‌ರುಬಾ, ಅವಳ ಮೂಲ ಹೆಸರು ಮರೆತುಹೋಗಿದೆ. ಬೆಳಕಿನ ಕಿರಣವೊಂದನ್ನು ಭೀಮವ್ವಳ ಎದೆಯೊಳಗೆ ತೂರಿಬಿಟ್ಟಳು! ಏನೊಂದು ಉಳಿದಿರಲಿಲ್ಲ, ಮೃತದೇಹದೆದುರು ಮಂಚದ ಮೇಲೆ ಮಿಡತೆಯಂತೆ ಮಲಗಿಕೊಂಡಿರುವಾಗ ಬಂದು ಇವಳ ಮುಂಗುರುಳನ್ನು ನೇವರಿಸಿ, 'ಊರ್ ಕಡೆ ಯೋಚ್ನೆ ಮಾಡ್ತಾ ಇದೀಯ?' ಹೀಗೇನೋ ಅವಳು ಕೇಳಿಬಿಟ್ಟಳಲ್ಲ, ನಿಜಕ್ಕೂ ಭೀಮವ್ವ ಊರಿನ ಚಿಂತೆಯನ್ನು ಬಿಟ್ಟು ಎಷ್ಟೋ ಕಾಲವಾಗಿತ್ತು. ಯಲ್ಲಾಲಿಂಗ, ಚನ್ನವ್ವ, ಘಟಪ್ರಭಾ ನದಿ, ಊರಿನ ಜನರೆಲ್ಲರೂ ಒಮ್ಮೆಲೇ ಪ್ರವಾಹದಂತೆ ಹರಿದುಬಂದರು. ಅಲ್ಲಿಂದ ಇವರಿಬ್ಬರ ಗೆಳೆತನ ಬೆಳೆಯತೊಡಗಿತು.

ದಿಲ್‌ರುಬಾ, ಹಣ್ಣಿನ ಟೆಂಪೋ ಓಡಿಸುವ ಗಿರಾಕಿ ಸಲೀಂನನ್ನು ಪರಿಚಯಿಸಿಕೊಂಡು ಅವನನ್ನು ಪ್ರೀತಿಯ ಕೂಪದಲ್ಲಿ ಕೆಡವಿಕೊಂಡಿದ್ದಳು, ಅದು ಈಗ ನೆರವಿಗೆ ಬಂದಿತ್ತು. ಭೀಮವ್ವಳನ್ನು ತನ್ನೊಂದಿಗೆ ಕರೆದುಕೊಂಡು ದಿಲ್‌ರುಬಾ, ಸಲೀಂನ ಹಣ್ಣಿನ